ಶ್ರೀಮಾನ್ ಸಿದ್ದಪ್ಪನವರಿಗೆ ಪ್ರಾರ್ಥನೆ ಮಾಡುತ್ತೇನೆ ಮತ್ತು ಪೋಲೀಸ್ ಪ್ರೊಟೆಕ್ಷನ್ ಬೇಕಾದರೆ ಅದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಿಕೊಡುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತೇನೆ. ಈ ಘಟನೆಯು ಪಕ್ಷಗಳ ಭೇದ ಭಾವನೆಯಿಂದ ನಡೆದಿರತಕ್ಕ ಘಟನೆ ಆಗಿದೆ. ಆದ್ದರಿಂದ ಎಲ್ಲರೂ ಕೂಡ ಇದರ ಬಗ್ಗೆ ಸಾಕಾದಷ್ಟು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೆ ನಾನು ತಮ್ಮೆಲ್ಲರಿಗೂ ಸಮಾಧಾನ ತಂದುಕೊಳ್ಳಿ ಬೇಕೆಂದು ಹೇಳಲು ಇಷ್ಟಪಡುತ್ತೇನೆ.

2-30 P.M.

Taking up the Birla Affairs for Discussion

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ ೩೧೨ರ ಪ್ರಕಾರ ೨-೩ ದಿನಗಳ ಹಿಂದೆ ನೋಟೀಸ್ ಕಳುಹಿಸಿದ್ದೆ ಅದು ಅತಿ ಮುಖ್ಯವಾವ ವಿಷಯ ಆದ್ದರಿಂದ ಶ್ರೀಮಾನ್ ಕಾಗೋಡು ತಿಮ್ಮಪ್ಪ ಮತ್ತು ೫-೬ ಜನ ಸೇರಿ ನೋಟೀಸ್ ಕೊಟ್ಟಿದ್ದೇವೆ. ಅದು ನಮ್ಮ ಆದೇಶದಲ್ಲಿರುವ ಬಿರ್ಲಾರವರ ಬಗ್ಗೆ ಆಗಿದೆ.

ಅಧ್ಯಕ್ಷರು —ಅದನ್ನು ಕಳುಹಿಸಿದ್ದೇವೆ ಉತ್ತರ ಬಂದ ತಕ್ಷಣ ಅಜೆಂಡಾದಲ್ಲಿ ಹಾಕುತ್ತೇವೆ.

Delay in taking up Miscellaneous notices

ಶ್ರೀ ಎಂ. ಎಸ್. ಕೃಷ್ಣನ್.—ಅದು ಕಾಲ್ ಅಟೆನ್‌ಷನ್ ಮೋಷನ್ ಅಲ್ಲ ರೂಲ್ ೩೧೨ ರ ಪ್ರಕಾರ ತಮ್ಮ ಮೂಲಕ ಸರ್ಕಾರದ ಗಮನವನ್ನು ನಾನು ಸೆಳೆಯುವುದಕ್ಕೆ ಇಚ್ಛೆ ಪಡುತ್ತೇನೆ.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಬರಲಿ.

ಶ್ರೀ ಕಾಗೋಡು ತಿಮ್ಮಪ್ಪ.—ರೂಲ್ ೩೧೨ರ ಪ್ರಕಾರ ಚರ್ಚೆ ಮಾಡುವುದಕ್ಕೆ ಬೆಂಗಳೂರು ನಗರದ ಉಪಾಧ್ಯಾಯರ ಶೋಷಣೆ ಬಗ್ಗೆ ಮತ್ತು ಕೆಲವು ಖಾಸಗಿ ಶಾಲೆಗಳಲ್ಲಿ ನಡೆಯತಕ್ಕ ವ್ಯಾಪಾರಿ ಮನೋ ಭಾವದ ಆಡಳಿತದ ಬಗ್ಗೆ ಚರ್ಚೆ ಮಾಡುವ ಒಂದು ವಿಷಯ ತಮಗೆ ಕಳುಹಿಸಿಕೊಟ್ಟಿದ್ದೆ?

ಅಧ್ಯಕ್ಷರು.—ಮಂತ್ರಿಗಳು ಬರಲಿ.

ಶ್ರೀ ಕೊಣಂದೂರು ಲಿಂಗಪ್ಪ.—ಅರಣ್ಯ ಸಚಿವರು ಇದ್ದಾರೆ, ಮಲೆನಾಡಿನಲ್ಲಿ ಇವೊತ್ತು ಕಟ್ಟಿಗೆ ಗಾಡಿಗೆ ಎರಡೂವರೆ ರೂಪಾಯಿ ವಸೂಲು ಮಾಡಬೇಕು ಎಂದು ಆದೇಶ ಇದ್ದರೂ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಗಾಡಿಗೆ ೫ ರೂಪಾಯಿ ವಸೂಲು ಮಾಡುತ್ತಿದ್ದಾರೆ ಮತ್ತು ಅಸೇಕರಿಗೆ ತೊಂದರೆಕೊಡುತ್ತಿದ್ದಾರೆ, ಇದರ ಬಗ್ಗೆ ಷಾರ್ಟ್ ನೋಟೀಸ್ ಕೊಶ್ಚನ್ ಕಳುಹಿಸಿ ೬-೭ ದಿವಸಗಳಾಯಿತು.

ಅಧ್ಯಕ್ಷರು.—ಇವೊತ್ತು ಅಥವಾ ನಾಳೆ ಉತ್ತರ ಬರುತ್ತದೆ. ಬಂದ ತಕ್ಷಣ ಅಜೆಂಡಾದಲ್ಲಿ ಹಾಕುತ್ತೇವೆ.

Protection to member (contd.)

ಶ್ರೀ ಕೆ. ಎಚ್. ಹನುಮೇಗೌಡ.—ಕಳೆದ ೨೦ ದಿವಸಗಳ ಮೇಲಾದರೂ ಆ ಕೇಡಿಗಳನ್ನು ಅರೆಸ್ಟ್ ಮಾಡಿಲ್ಲ. ಅವನು ಯಾರದೋ ಆಶ್ರಯಪಡೆದು ಅಲ್ಲಿಯೇ ಓಡಾಡುತ್ತಿದ್ದಾನೆ. ಅವನ ಮೇಲೆ ಆಕ್ಷನ್ ತೆಗೆದುಕೊಂಡಿಲ್ಲ. ಪೋಲೀಸರನ್ನು ಕೇಳಿದರೆ ಬೇರೆಯವರನ್ನು ಹಿಡಿದುಕೊಂಡು ಹೇಳಿಕೆ ತೆಗೆದುಕೊಂಡು ಕಳುಹಿಸುತ್ತಾರೆ. ಹಿಂದುಗಡೆ ಇದ್ದುಕೊಂಡು ದುಡ್ಡನ್ನು ಕೊಡುವವರನ್ನು ವಿಚಾರಣೆ ಮಾಡಿಲ್ಲ. ಪೋಲೀಸರು ಆಕ್ಷನ್ ತೆಗೆದುಕೊಂಡಿಲ್ಲ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಏನೂ ಹೇಳಲಿಲ್ಲ. ಅವರು ಈ ವಿಚಾರದಲ್ಲಿ ಸ್ಪಷ್ಟವಾಗಿ ಹೇಳಬೇಕೆಂದು ಒತ್ತಾಯಮಾಡುತ್ತೇನೆ.

ಅಧ್ಯಕ್ಷರು.—ಎಲ್ಲ ವಿವರ ತರಿಸುವುದಕ್ಕೆ ಏರ್ಪಾಡು ಮಾಡಿದ್ದೇವೆಂದು ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ನಾನು ಒಂದು ಸಲಹೆ ಮಾಡುತ್ತೇನೆ. ಇಲ್ಲಿಂದ ಸ್ಪೆಷಲ್ ಸ್ಕ್ವಾಡ್ ಸಿ ಐ.ಡಿ. ಆಫೀಸರ್ಸ್‌ಗೆ ಕಳುಹಿಸಿ ಸ್ಥಳದಲ್ಲಿ ನಡೆದಂತಹ ಘಟನೆ ಬಗ್ಗೆ ರಿಪೋರ್ಟು ದಯಮಾಡಿ ತರಿಸಿ ನಮ್ಮ ಲೋಕಲ್ ಆಫೀಸರ್ಸ್ ಮೇಲೆ ಪ್ರಭಾವಬೀರಿ ಗಲಾಟೆ ಮಾಡುತ್ತಿದ್ದಾರೆ. ಈ ಘಟನೆ ಬಗ್ಗೆ ಆಲ್ಲಿಯವರನ್ನು ವಿಚಾರಮಾಡಿದರೆ ಗೊತ್ತಾಗುತ್ತದೆ. ನಿರಪರಾಧಿಗಳಾದ ೨೦–೨೫ ಜನ ಹರಿಜನರನ್ನು ಹಿಡಿದಿದ್ದಾರೆ. ಅವರಿಗೆ ಏನೂ ಗೊತ್ತಿಲ್ಲ. ಆದುದರಿಂದ ಸಿ ಐ.ಡಿ. ಆಫೀಸರ್ ಕಳುಹಿಸಿ ಅವರ ಮುಖಾಂತರ ಎನ್‌ಕ್ವೈರಿ ಮಾಡಿಸಿ ಅವರ ರಿಪೋರ್ಟ್ ಬಂದಮೇಲೆ ಯಾರುಯಾರು ಇನ್‌ವಾಲ್ವ್ ಆಗಿದ್ದಾರೆ ಪರಿಶೀಲನೆ ಮಾಡಿ.

Starting the Bunding Works in Yadagiri, Shahapur and Raichur Taluk

ಶ್ರೀ ವಿಶ್ವನಾಥರೆಡ್ಡಿ (ಯಾದಗಿರಿ).—ನನ್ನ ಹತ್ತಿರ ಒಂದು ಟೆಲಿಗ್ರಾಮ್ ಇದೆ. ಮಾನ್ಯ ಅಗ್ರಿ ಕಲ್ಚರ್ ಮಿನಿಸ್ಟರು ನಮ್ಮ ಕಡೆಗೆ ಬರಗಾಲ ಪ್ರದೇಶ ಅಲ್ಲಿ ಬಂಡಿಂಗ್ ವರ್ಕ್ ನಡೆದಿದೆ ಎಂದು ಹೇಳಿದರು. ಆದರೆ ಆಲ್ಲಿ ಸರ್ವ ವರ್ಕ್ ಕಂಪ್ಲೀಟ್ ಆಗಿದೆ. ಸುಮಾರು ೩೫೦ ಜನ ಲೇಬರರ್ಸ್ ಒಂದು ವಾರದಿಂದ ಉಪವಾಸ ಕೂತಿದ್ದಾರೆ. ನನಗೆ ಬಂದಿರುವ ಟೆಲಿಗ್ರಾಂನಲ್ಲಿ ಈ ರೀತಿ ಇದೆ :—

> "Survey completed two blocks, since one week 350 labourers workless starving, further survey of Bunding work please be started, requested."

ಇದೂ ಅಲ್ಲದೆ ಬೇರೆ ಕಡೆ ಕೂಡ ಕೆಲಸ ಬಹಳ ಸಾವಕಾಶದಿಂದ ಆಗುತ್ತಿದೆ. ಆ ಕಡೆ ಮಂತ್ರಿಗಳು ತೀವ್ರವಾದ ಗಮನಕೊಡಬೇಕು.

ಶ್ರೀ ಭಾಪುಗೌಡ ರಾಯಪ್ಪ.—ಅದೇ ರೀತಿ ಷಹಾಪುರದಿಂದ ೪೦೦ ಜನರು ಬೆಣ್ಣೆಹೊಳೆಯಲ್ಲಿ ಕೆಲಸ ಇಲ್ಲದೆ ಉಪವಾಸ ಇದ್ದಾರೆ. ಸ್ಪ್ಯಾಫ್ ಇಲ್ಲದ ಕಾರಣ ಕೆಲಸ ಸ್ಥಗಿತವಾಗಿದೆ. ಸುತ್ತಮುತ್ತಲ ಜನರೂ ಕೆಲಸವಿಲ್ಲದೆ ಗಂಭೀರ ಪರಿಸ್ಥಿತಿ ಉದ್ಭವಿಸಿದೆ. ಅದಕ್ಕೆ ಸೂಕ್ತ ಕ್ರಮ ತೆಗೆದುಕೊಂಡು ಅನುಕೂಲ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್..ಡಿ. ದೇವೇಗೌಡ.—ರಾಯಚೂರಿನಲ್ಲಿ ಕೆಲವು ಭಾಗದಲ್ಲಿ ಕ್ಷಾಮಪರಿಸ್ಥಿತಿ ಭೀಕರವಾಗಿದೆ. ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ಏಕಸದಸ್ಯ ಆಯೋಗದ ವರದಿ ಬಂದಮೇಲೆ ಚರ್ಚೆಮಾಡಬೇಕು ಎಂದು ನಿರ್ಣಯ ತೆಗೆದುಕೊಂಡಿದೆ. ಆದರೆ ಅವರಿಗೆ ರಾಯಚೂರ್ ಪ್ರವಾಸ ಮಾಡುವುದಕ್ಕೆ ಅಪ್ಪಣೆಯಿಲ್ಲ. ಅವರು ಬೀದರ್, ಗುಲ್ಬರ್ಗಾ ಮತ್ತು ಬೆಳಗಾಂ ಜಿಲ್ಲೆಗಳನ್ನು ನೋಡಿಕೊಂಡು ಬರುತ್ತಾರೆ, ಆದ್ದರಿಂದ ರಾಯಚೂರ್ ಡೆಪ್ಯುಟಿ ಕಮೀಷನರ್‌ನವರಿಂದ ವರದಿಯನ್ನು ತರಿಸುವುದಕ್ಕೆ ಏರ್ಪಾಡುಮಾಡಿ. ನಾಳೆದ್ದು ಚರ್ಚೆಮಾಡುವ ಕಾಲದಲ್ಲಿ ನಮಗೆ ಸರ್ಕಾರ ರಾಯಚೂರ್ ಬಗ್ಗೆ ಮಾಹಿತಿಯನ್ನು ಒದಗಿಸಬೇಕು. ಅಲ್ಲಿಯೂ ಕೂಡ ಹುಡುಗರು ಫೀ ರಿಯಾಯತಿಗೆ ಒದ್ದಾಡುತ್ತಿದ್ದಾರೆ. ಬಿಜಾಪುರ್, ಬೆಳಗಾಂ ಮತ್ತು ಗುಲ್ಬರ್ಗಾ ಭಾಗಗಳ ಬಗ್ಗೆ ಏನು ಫೀ ರಿಯಾಯತಿ ಕೊಟ್ಟಿದ್ದೀರಿ ಅದನ್ನು ರಾಯಚೂರು ಮುಕ್ಕಳು ಯಾರು ಯಾರು ಇದ್ದಾರೆ ಅವರಿಗೂ ಕೊಡತಕ್ಕ ಪ್ರಯತ್ನ ಮಾಡಬೇಕು.....

> Fee concession to the students of Raichur should be extended pending discussion of the report that is going to be submitted by Sri Armugam.

† ಶ್ರೀ ಎಸ್. ವೈ. ಪಾಟೀಲ್.—ಮಾನ್ಯ ಸಭಾಧ್ಯಕ್ಷಣಿಯವರೆ, ಕೆಲಸ ಬಹಳ ನಡೆದಿದೆ ಎಂದು ಸರ್ಕಾರದವರು ಹೇಳುತಿದ್ದಾರೆ. ನಾನು ಆಗಿಲ್ಲ ಎಂದು ಹೇಳತಕ್ಕದ್ದು ಸರಿಯಲ್ಲ. ೨೭ನೇ ತಾರೀಖಿನ ವರೆಗೆ ಸಿಂದಗಿ ಮತ್ತು ಇಂಡಿ ತಾಲ್ಲೂಕುಗಳಲ್ಲಿ ಬಂಡಿಂಗ್ ಕೆಲಸ ಯಾವಯಾವ ಸೆಕ್ಟರಿನಲ್ಲಿ ನಡೆದಿದೆ, ಪ್ರತಿಯೊಂದು ಸೆಕ್ಟರಿನಲ್ಲಿ ಎಷ್ಟೆಷ್ಟು ಕೆಲಸಗಾರರು ಇದ್ದಾರೆ ಎನ್ನುವ ಅಂಕಿಯನ್ನು ಮತ್ತು ಇವೊತ್ತಿನ ಅಂಕಿಯನ್ನು ಕೊಡಬೇಕು. ಆಪ್ಪರ್ ಕೃಷ್ಣ ಕ್ಯಾನಲ್ ವರ್ಕ್ ಪ್ರಾರಂಭ ಮಾಡಿದರೂ ಅಲ್ಲಿ ಜಮೀನು ಇರಲಾರದ ಕಾರಣ ಕೆಲಸ ನಡೆದಿದೆಯೋ ಇಲ್ಲವೋ ಗೊತ್ತಿಲ್ಲ. ಈ ಮೂರು ಸಂಗತಿಗಳನ್ನು ಸ್ಪಷ್ಟವಾಗಿ ಹೇಳಬೇಕು. ಡೆಪ್ಯುಟಿ ಕಮೀಷನರ್ ತಿಳಿದುಕೊಂಡಿದಾರೆ ಜನರು ಅಲ್ಲಿಯವರಿಗೆ ಹೋಗುವುದಿಲ್ಲ. ಅಲ್ಲಿಗೆ